ಸಿಟಿಲೈಟ್ಸ್

ಹಾಸ್ಟೆಲ್ ವ್ಯವಸ್ಥೆ ಸರಿಪಡಿಸಿ

ರಾಯಚೂರು: ''ನಗರದಲ್ಲಿನ ನಾನಾ ವಿದ್ಯಾರ್ಥಿ ನಿಲಯಗಳು ಅವ್ಯವಸ್ಥೆಯಿಂದ ಕೂಡಿದ್ದು, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ವಸತಿ ನಿಲಯಗಳಿಗೆ

ಭೇಟಿ ನೀಡಿ ನಿಲಯಗಳ ವಾರ್ಡನ್‌ಗಳ ವಿರುದ್ಧ ಕ್ರಮ ಕೈಗೊಳ್ಳಬೇಕು,'' ಎಂದು ಛಲವಾದಿ ಮಹಾಸಭಾ ಜಿಲ್ಲಾಧ್ಯಕ್ಷೆ ಅರ್ಚನಾ ಸುಂಕಾರಿ ಒತ್ತಾಯಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ''ವೃತ್ತಿಪರ ವಸತಿ ನಿಲಯ ಹಾಗೂ ಇತರೆ ವಿದ್ಯಾರ್ಥಿ ನಿಲಯಗಳಲ್ಲಿ ನಾನು ಸ್ವತಃ ಭೇಟಿ ನೀಡಿದಾಗ ವಾರ್ಡನ್‌ಗಳು ಹಾಗೂ ಅಡುಗೆ ಸಿಬ್ಬಂದಿ ವಿದ್ಯಾರ್ಥಿಗಳಿಗೆ ನೀಡಬೇಕಾದ ಆಹಾರವನ್ನು ಕದ್ದು ಮನೆಗೆ ತೆಗೆದುಕೊಂಡು ಹೋಗುತ್ತಿರುವುದು ಹಾಗೂ ಸ್ವಚ್ಛತೆ ಇಲ್ಲದಿರುವುದು ಕಂಡು ಬಂದಿದೆ. ಅಲ್ಲದೆ, ಸರಕಾರದ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ಸರಿಯಾಗಿ ತಲುಪಿಸುತ್ತಿಲ್ಲ,'' ಎಂದು ದೂರಿದರು. ''ವಿದ್ಯಾರ್ಥಿಗಳಿಗೆ ಸರಿಯಾದ ಶೌಚಾಲಯ ಸೌಲಭ್ಯವಿಲ್ಲ. ಕುಡಿಯುವ ನೀರು ಲಭ್ಯವಾಗುತ್ತಿಲ್ಲ. ವಿದ್ಯಾರ್ಥಿಗಳು ಮೇಲ್ವಿಚಾರಕ ಗಮನಕ್ಕೆ ತಂದರೂ ಸರಿಯಾಗಿ ಸ್ಪಂದಿಸುತ್ತಿಲ್ಲ. ಕೂಡಲೇ ಪರಿಶೀಲನೆ ನಡೆಸಿ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ವಿದ್ಯಾರ್ಥಿಗಳೊಂದಿಗೆ ಮುಂದಿನ ದಿನಗಳಲ್ಲಿ ಹೋರಾಟ ನಡೆಸಲಾಗುವುದು,'' ಎಂದು ಎಚ್ಚರಿಕೆ ನೀಡಿದರು. ಛಲವಾದಿ ಮಹಾಸಭಾ ಖಂಜಾಂಚಿ ಮೀನಾಕ್ಷಿ, ಸದಸ್ಯೆ ಲಕ್ಷ್ಮೀ ಇದ್ದರು.

ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆ

ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಸ್ವೀಪ್ ಸಮಿತಿಯಿಂದ ರಾಷ್ಟ್ರೀಯ ಮತದಾರ ದಿನದ ನಿಮಿತ್ತ ನಗರದ ಜಲ ನಿರ್ಮಲ ಸಭಾಂಗಣದಲ್ಲಿ ಇತ್ತೀಚೆಗೆ ಜಿಲ್ಲಾಮಟ್ಟದ ಪ್ರಬಂಧ ಸ್ಪರ್ಧೆ ನಡೆಯಿತು. ಜಿ.ಪಂ.ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ ಉದ್ಘಾಟಿಸಿ ಮಾತನಾಡಿ, ''ಚುನಾವಣೆ ಮತ್ತು ಮತದಾನ ಸಂದರ್ಭದಲ್ಲಿ ನಾನಾ ಕಾರ್ಯ ಚಟುವಟಿಕೆಗಳು ನಡೆಯುತ್ತಿದ್ದು, ಅವುಗಳ ಅರಿವು ಮೂಡಿಸುವ ಹಿನ್ನೆಲೆ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆ ಆಯೋಜಿಸಿದೆ. ಇಂಥ ಸ್ಪರ್ಧೆಗಳು ವಿದ್ಯಾರ್ಥಿಗಳಿಗೆ ಚುನಾವಣೆ ಮತ್ತು ಮತದಾನದ ಬಗ್ಗೆ ತಿಳಿದುಕೊಳ್ಳಲು ಅವಶ್ಯಕವಾಗಿವೆ,'' ಎಂದರು. ಡಿಡಿಪಿಐ ಕೆ.ಡಿ.ಬಡಿಗೇರ, ನೋಡಲ್ ಅಧಿಕಾರಿ ಡಾ.ದಂಡಪ್ಪ ಬಿರಾದಾರ ಮಾತನಾಡಿದರು. ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು, ಪದವಿ ಮತ್ತು ವಿಶ್ವವಿದ್ಯಾಲಯಗಳ ವಿಭಾಗವಾರು ಪ್ರತ್ಯೇಕ ವಿಷಯಗಳ ಮೇಲೆ ವಿದ್ಯಾರ್ಥಿಗಳು ಪ್ರಬಂಧ ಬರೆದರು. ಪದವಿ ಪೂರ್ವ ಶಿಕ್ಷಣ ವಿಭಾಗದ ಮಂಜುನಾಥ್, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿವಿ ಪ್ರಾಧ್ಯಾಪಕ ಡಾ.ಚನ್ನಬಸವ, ಡಾ.ಶಂಕರಾನಂದ ಜಿ. ಇದ್ದರು. ಶಿಕ್ಷಣ ಸಂಯೋಜಕ ಸಿ. ಪಿ.ಓದಿಸೋಮಠ ನಿರ್ವಹಿಸಿದರು.

ಕೊಲೆ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ಒತ್ತಾಯ | ಕುಟುಂಬಕ್ಕೆ ಪರಿಹಾರಕ್ಕೆ ಆಗ್ರಹ

ಮರ್ಯಾದೆಗೇಡು ಹತ್ಯೆ: ಖಂಡನೆ

■ **ವಿಕ ಸುದ್ದಿಲೋಕ** ಲಿಂಗಸುಗೂರು

''ಹುಬ್ಬಳ್ಳಿ ತಾಲೂಕಿನ ಇನಾಂ ವೀರಾಪೂರ ಗ್ರಾಮದ ದಲಿತ ಯುವಕ ವಿವೇಕಾನಂದ ದೊಡ್ಡಮನಿ ಅವರ ಪತ್ನಿ ಮಾನ್ಯ ಅವರನ್ನು ಹತ್ಯೆ ಮಾಡಿದ ಪ್ರಕಾಶಗೌಡ ಪಾಟೀಲ್ ಸೇರಿ ಕೊಲೆಗಡುಕರನ್ನು ಬಂಧಿಸಿ, ಅವರಿಗೆ ಗಲ್ಲು ಶಿಕ್ಷೆ ವಿಧಿಸಬೇಕು,'' ಎಂದು ರಾಜ್ಯ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ಒತ್ತಾಯಿಸಿದರು.

ಸಹಾಯಕ ಆಯುಕ್ತ ಬಸವಣ್ಣೆಪ್ಪ ಕಲಶೆಟ್ಟಿ ಅವರಿಗೆ ಶುಕ್ರವಾರ ಮನವಿ ಸಲ್ಲಿಸಿ ಮಾತನಾಡಿದ ಮುಖಂಡರು, ''ದೇಶ ಮತ್ತು ರಾಜ್ಯದಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ ಎನ್ನುವುದಕ್ಕೆ ಈ ಮರ್ಯಾದೆಗೇಡು ಹತ್ಯೆಯೇ ಸಾಕ್ಷಿಯಾಗಿದೆ. ಇಂಥಹ ಕುಕೃತ್ಯ ತಡೆಯಲು ಹೊಸ ಕಾನೂನು ಜಾರಿಗೆ ತರಬೇಕು. ಹತ್ಯೆಗೆ ಕಾರಣರಾಗಿರುವ ಪ್ರಕಾಶಗೌಡ ಪಾಟೀಲ್, ಪ್ರೀತಮ್‌ಗೌಡ ಪಾಟೀಲ್, ಅರುಣಗೌಡ ಪಾಟೀಲ್, ಈರಪ್ಪ ಹಾಗೂ ಮುದುಕಪ್ಪ ಅವರಿಗೆ ಗಲ್ಲು ಶಿಕ್ಷೆ ವಿಧಿಸಬೇಕು. ರಾಜ್ಯದಲ್ಲಿ ಮರ್ಯಾದೆಗೇಡು ಹತ್ಯೆಗಳು ಮರುಕಳಿಸದಂತೆ ಪೊಲೀಸ್ ಇಲಾಖೆ ಮುಂಜಾಗ್ರತೆ ಕ್ರಮವಹಿಸಬೇಕು. ವಿವೇಕಾನಂದನ ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ನೀಡಬೇಕು. ಚಿಕಿತ್ಸೆ ವೆಚ್ಚ ಭರಿಸಬೇಕು. ಈ ಪ್ರಕರಣದಲ್ಲಿ ಗಾಯಗೊಂಡವರಿಗೆ ತಲಾ 10 ಲಕ್ಷ ರೂ. ಪರಿಹಾರ ನೀಡಬೇಕು. ಮೃತಳ ಕುಟುಂಬಕ್ಕೆ ಸೂಕ್ತ ರಕ್ಷಣೆ ಹಾಗೂ ಪೊಲೀಸ್ ಭದ್ರತೆ ಒದಗಿಸಬೇಕು,'' ಎಂದು ಒತ್ತಾಯಿಸಿದರು.

ದಸಂಸ ರಾಜ್ಯ ಸಂಘಟನಾ ಸಂಚಾಲಕ ಪ್ರಭುಲಿಂಗ ಮೇಗಳಮನಿ, ಸಾಮಾಜಿಕ ಜಾಲತಾಣ ವಕ್ತಾರ ಅಕ್ರಂಪಾಷಾ, ಮುಖಂಡರಾದ ಷಣ್ಮುಖರಡ್ಡಿ, ಮಾಳಪ್ಪಗೌಡ, ಹನುಮೇಶ ಕುಪ್ಪಿಗುಡ್ಡ, ಹುಸೇನಪ್ಪ ನಾಯಕ, ಬಾಲರಾಜ ನಾಯಕ, ದೇವೆಂದ್ರಪ್ಪ ಹುನಕುಂಟಿ, ಹನುಮಂತ ದೇವದುರ್ಗ, ಪರಮಾನಂದ ಹಾದಿಮನಿ, ಪರಶುರಾಮ ಹಾಗೂ ಇತರರಿದ್ದರು.

ಕೊಲೆಗಡುಕರ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿ ದಸಂಸ ಕಾರ್ಯಕರ್ತರು ಲಿಂಗಸುಗೂರು ಪಟ್ಟಣದಲ್ಲಿ ಎಸಿ ಬಸವಣ್ಣೆಪ್ಪ ಕಲಶೆಟ್ಟಿ ಅವರಿಗೆ ಶುಕ್ರವಾರ ಮನವಿ ಸಲ್ಲಿಸಿದರು.

ಮರ್ಯಾದೆಗೇಡು ಹತ್ಯೆ ಖಂಡಿಸಿ ಸಿಂಧನೂರಿನಲ್ಲಿ ಜನವಾದಿ ಮಹಿಳಾ ಸಂಘಟನೆಯಿಂದ ಶುಕ್ರವಾರ ತಹಸೀಲ್ದಾರರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಮನವಿ ಸಲ್ಲಿಕೆ

ಸಿಂಧನೂರು: ಗರ್ಭಿಣಿ ಯುವತಿ ಮಾನ್ಯ ಪಾಟೀಲ್ ಮರ್ಯಾದೆಗೇಡು ಹತ್ಯೆ ಖಂಡಿಸಿ ಜನವಾದಿ ಮಹಿಳಾ ಸಂಘಟನೆಯಿಂದ ಶುಕ್ರವಾರ ತಹಸೀಲ್ದಾರರಿಗೆ ಮನವಿ ಪತ್ರ ಸಲ್ಲಿಸಲಾಯಿತು. ''ಹುಬ್ಬಳ್ಳಿ ತಾಲೂಕಿನ ಇನಾಂ ವೀರಾಪುರದಲ್ಲಿ ದಲಿತ ಯುವಕ ನನ್ನು ಮದುವೆಯಾಗಿ, ಏಳು ತಿಂಗಳು ಗರ್ಭಿಣಿಯಾಗಿದ್ದ ಮಾನ್ಯ ಪಾಟೀಲ್ ಅವರ ಮೇಲೆ ತಂದೆ ಹಾಗೂ ಕುಟುಂಬಸ್ಥರು ದಾಳಿ ಮಾಡಿ, ನಡೆಸಿದ ಮರ್ಯಾದೆಗೇಡು ಭೀಕರ ಹತ್ಯೆ ನಾಗರಿಕ ಸಮಾಜಕ್ಕೆ ಆಘಾತ ಉಂಟು ಮಾಡಿದೆ. ಈ ರೀತಿಯ ಘಟನೆಗಳು ಮರು ಕಳಿಸದಂತೆ ಎಚ್ಚರವಹಿಸುವುದು ಮತ್ತು ದೌರ್ಜನ್ಯ ತಡೆಗಟ್ಟಲು ನ್ಯಾ. ಜಿ.ಎಸ್.ವರ್ಮಾ ಹಾಗೂ ಉಗ್ರಪ್ಪ ಸಮಿತಿಯ ಮಹಿಳಾ ಪರ ಕಾನೂನು ಶಿಫಾರಸುಗಳನ್ನು ತ್ವರಿತವಾಗಿ ಜಾರಿಗೊಳಿಸಬೇಕು,'' ಎಂದು ಒತ್ತಾಯಿಸಿದರು. ಸಂಘದ ಜಿಲ್ಲಾಧ್ಯಕ್ಷೆ ಶಕುಂತಲಾ ಪಾಟೀಲ್, ತಾಲೂಕು ಅಧ್ಯಕ್ಷೆ ಗಿರಿಜಾ ಕಿಲ್ಲೇದ, ಪ್ರಧಾನ ಕಾರ್ಯದರ್ಶಿ ಸಿದ್ದೇಶ್ವರಿ, ನಾಗರತ್ನ ತುರುವಿಹಾಳ, ಅಪ್ಪಣ್ಣ ಕಾಂಬಳೆ, ಮಲ್ಲಮ್ಮ, ದೇವಮ್ಮ, ಹುಸೇನಮ್ಮ, ಪಾರ್ವತಿ ಇತರರಿದ್ದರು.

ವಿಕ - ಚಿತ್ರ ಸುದ್ದಿ



ಲಿಂಗಸುಗೂರು ಹಿರಿಯ ಪತ್ರಕರ್ತ ದಿ. ಬಿ.ಎ.ನಂದಿಕೋಲಮಠರ ಸ್ಮರಣಾರ್ಥ ಪತ್ರಕರ್ತರ ಸಂಘದಲ್ಲಿ ದತ್ತಿ ಪ್ರಶಸ್ತಿ ಆರಂಭಿಸಲು ಮೃತರ ಸಹೋದರ ಶಿವಕುಮಾರ ನಂದಿಕೋಲಮಠ, ರಾಯಚೂರಿನಲ್ಲಿ ನಡೆದ ಪದಗ್ರಹಣ ಸಮಾರಂಭದಲ್ಲಿ ಒಂದು ಲಕ್ಷ ರೂ. ಚೆಕ್ ಅನ್ನು ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರಿಗೆ ಹಸ್ತಾಂತರಿಸಿದರು.

ಮಾನ್ವಿಯಲ್ಲಿ ಲಯನ್ಸ್ ಕ್ಲಬ್‌ನಿಂದ ಪತ್ರಿಕಾ ವಿತರಕರಿಗೆ ಸ್ವೆಟರ್ ವಿತರಿಸಲಾಯಿತು. ಲಯನ್ಸ್ ಕ್ಲಬ್ ಅಧ್ಯಕ್ಷ ಎಂ.ನಾಗರಾಜ, ಕಾರ್ಯದರ್ಶಿ ಶಾಂತಮೂರ್ತಿ, ಖಜಾಂಚಿ ಶ್ರೀರಾಮ ರಾಜು, ಸದಸ್ಯರಾದ ಈರಣ್ಣ ಮರ್ಲಟ್ಟಿ, ವೆಂಕಟೇಶ ಇಲ್ಲೂರ, ಡಾ.ಬಸವರಾಜ ಸಜ್ಜನ, ಬಸವರಾಜ ಕಡಿ ಇತರರಿದ್ದರು.

ಮುದಗಲ್ ಸಮೀಪದ ಚಿಕ್ಕಲೆಕ್ಕಿಹಾಳ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಬೆಂಗಳೂರಿನ ಉತ್ತಿಷ್ಠ ಟ್ರಸ್ಟ್‌ನವರು ಶುಕ್ರವಾರ ಉಚಿತವಾಗಿ ಸ್ಮಾರ್ಟ ಟಿವಿ ನೀಡಿದರು. ಮುಖ್ಯ ಶಿಕ್ಷಕ ಲಕ್ಕನಗೌಡ, ಶಿಕ್ಷಕ ಮೌನೇಶ ಆಚಾರ್ಯ ಇದ್ದರು.

'ಸಂಗೀತದಿಂದ ಮನಸ್ಸಿಗೆ ಶಾಂತಿ, ನೆಮ್ಮದಿ'

■ **ವಿಕ ಸುದ್ದಿಲೋಕ** ರಾಯಚೂರು

''ಡಾ.ನರಸಿಂಹಲು ವಡವಾಟಿ ಅವರ ಸಂಸ್ಥೆಯಲ್ಲಿ ಸನ್ಮಾನವಾಗುತ್ತಿರುವುದು ನನ್ನ ಸೌಭಾಗ್ಯ. ಸಂಗೀತದಿಂದ ಶಾಂತಿ ಮತ್ತು ನೆಮ್ಮದಿ ದೊರಕುತ್ತದೆ,'' ಎಂದು ರಾಜ್ಯ ಮಾಹಿತಿ ಆಯೋಗದ ಕಲಬುರಗಿ ಪೀಠದ ಆಯುಕ್ತ ಬಿ.ವೆಂಕಟಸಿಂಗ್ ಹೇಳಿದರು.

ಇಲ್ಲಿನ ಉದಯ ನಗರದಲ್ಲಿ ಸ್ವರ ಸಂಗಮ ಸಂಗೀತ ವಿದ್ಯಾಸಂಸ್ಥೆಯಿಂದ ಶ್ರೀ ಸಿದ್ದರಾಮ ಜಂಬಲದಿನ್ನಿ ಸ್ಮರಣಾರ್ಥ ಏರ್ಪಡಿಸಿದ್ದ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

''ವಿಶ್ವಕ್ಕೆ ಭಾರತೀಯ ಸಂಸ್ಕೃತಿ ಪರಿಚಯಿಸಿ, ಜಿಲ್ಲೆಯಲ್ಲಿ ಸಂಗೀತ ಸಂಸ್ಥೆ ಕಟ್ಟುವುದರ ಮೂಲಕ ಶಿಷ್ಯ ಪರಂಪರೆ ಬೆಳೆಸುವಲ್ಲಿ ವಡವಾಟಿ ಅವರ ಪಾತ್ರ ಅಪಾರವಾಗಿದೆ,'' ಎಂದರು. ಸಂಸ್ಥೆಯ ಸಂಚಾಲಕ ಡಾ.ನರಸಿಂಹಲು ವಡವಾಟಿ ಮಾತನಾಡಿ, ''ಸರಳತೆ, ಸಹಜತೆ, ಬದ್ಧತೆ ಇವು ಮೂರು ವರಗಳು. ಇವುಗಳನ್ನು ತಿಳಿಯಲು ಗುರುಗಳು ಬೇಕು. ಹೇಳಿದ್ದನ್ನು ಕೇಳುವವರು ಬೇಕು. ಹೇಳಿದ್ದನ್ನು ಪಾಲಿಸಬೇಕು. ಆಗ ಮಾತ್ರ ನಿಜವಾದ ಗುರು ಕೃಪೆ ಆಗುತ್ತದೆ,'' ಎಂದು ತಿಳಿಸಿದರು. ಕಲಾವಿದರಿಂದ ಅಹೋರಾತ್ರಿ ಸಂಗೀತ ಕಾರ್ಯಕ್ರಮ ನಡೆಯಿತು.

ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಚಂದ್ರಶೇಖರ್ ಪಾಟೀಲ್ ಮಿರ್ಜಾಪುರ, ಕಿಲ್ಲೇ ಬೃಹನ್ಮಠದ ಶ್ರೀ ಶಾಂತಮಲ್ಲ ಶಿವಾಚಾರ್ಯರು, ಖ್ಯಾತ ಗಾಯಕಿ ವಡವಾಟಿ ಶಾರದಾ ಭರತ್, ಸಾಹಿತಿ ರಮೇಶ್ ಸಿ.ಸಾಗರ ಇದ್ದರು.



ರಾಯಚೂರಿನಲ್ಲಿ ಏರ್ಪಡಿಸಿದ್ದ ಸಂಗೀತ ಸಮ್ಮೇಳನದಲ್ಲಿ ಸ್ವರ ಸಂಗಮ ಸಂಗೀತ ವಿದ್ಯಾಸಂಸ್ಥೆಯ ಸಂಚಾಲಕ ಡಾ.ನರಸಿಂಹಲು ವಡವಾಟಿ ಅವರನ್ನು ಗಣ್ಯರು ಸನ್ಮಾನಿಸಿದರು.

2.7ಲೀಟರ್ ಮದ್ಯ ಜಪ್ತಿ

ಕೊಪ್ಪಳ: ತಾಲೂಕಿನ ಹೊಸಹಳ್ಳಿ ಸೀಮಾದ ಕಾಸನಕಂಡಿ ಕ್ರಾಸ್ ಸಮೀಪ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮದ್ಯ ಸಂಗ್ರಹಿಸಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಪೊಲೀಸರು ಗುರುವಾರ ಬಂಧಿಸಿ ಮದ್ಯ ಹಾಗೂ ನಗದು ಜಪ್ತಿ ಮಾಡಿದ್ದಾರೆ. ಹೊಸಹಳ್ಳಿ ಗ್ರಾಮದ ವೀರೇಶಪ್ಪ(63) ಬಂಧಿತ. ಆರೋಪಿಯಿಂದ 2.700 ಲೀಟರ್ ಮದ್ಯ ಹಾಗೂ ನಗದು 200 ರೂ. ವಶಪಡಿಸಿಕೊಂಡಿದೆ. ಮುನಿರಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಥಮ ಚಿಕಿತ್ಸೆ ಕಾರ್ಯಾಗಾರ

ಮಾನ್ವಿ ಪಟ್ಟಣದ ಬ್ರಾಹ್ಮಣವಾಡಿಯ ಸ.ಹಿ.ಪ್ರಾ. ಹಮ್ಮಿಕೊಂಡಿದ್ದ ಕಾರ್ಯಾಗಾರವನ್ನು ಬಿಇಒ ಚಂದ್ರಶೇಖರ ದೊಡ್ಡಮನಿ ಉದ್ಘಾಟಿಸಿದರು.

ಮಾನ್ವಿ: ಪಟ್ಟಣದ ಬ್ರಾಹ್ಮಣವಾಡಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಿಗೆ ಪ್ರಥಮ ಚಿಕಿತ್ಸೆ ಕುರಿತು ಹಮ್ಮಿಕೊಂಡಿದ್ದ ಕಾರ್ಯಾಗಾರವನ್ನು ಬಿಇಒ ಚಂದ್ರಶೇಖರ ದೊಡ್ಡಮನಿ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ''ಕ್ರೀಡೆಗಳ ಸಮಯದಲ್ಲಿ ಶಾಲಾ ಮಕ್ಕಳಲ್ಲಿ ಉಂಟಾಗುವ ಗಾಯಗಳು, ತಲೆ ಸುತ್ತು, ನಾನಾ ಸಂದರ್ಭದಲ್ಲಿ ಮಕ್ಕಳಿಗೆ ಪ್ರಥಮ ಚಿಕಿತ್ಸೆ ನೀಡುವುದು ಅಗತ್ಯ ಎಂಬ ಉದ್ದೇಶದಿಂದ ಶಿಕ್ಷಣ ಇಲಾಖೆಯಿಂದ ತಜ್ಞ ವೈದ್ಯರ ಮೂಲಕ ದೈಹಿಕ ಶಿಕ್ಷಣ ಶಿಕ್ಷಕರಿಗೆ ಪ್ರಥಮ ಚಿಕಿತ್ಸೆ ಕುರಿತು ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಅವರು ಎಸ್ಸೆಸ್ಸೆಲ್ಸಿ ಫಲಿತಾಂಶ ಹೆಚ್ಚಳಕ್ಕಾಗಿ ಸರಕಾರಿ ಶಾಲೆಗಳಲ್ಲಿ ವಿಜ್ಞಾನ ವಸ್ತು ಪ್ರದರ್ಶನ ಆಯೋಜನೆ, ವಿಜ್ಞಾನ ವಿಷಯ ಶಿಕ್ಷಕರಿಗೆ ತರಬೇತಿ ಕಾರ್ಯಾಗಾರ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರಿಗೆ ಪ್ರಥಮ ಚಿಕಿತ್ಸೆ ಕುರಿತು ಕಾರ್ಯಾಗಾರ ಸೇರಿ ನಾನಾ ಕಾರ್ಯಕ್ರಮ ನೀಡಿದ್ದಾರೆ,'' ಎಂದು ತಿಳಿಸಿದರು.

ಆರೋಗ್ಯ ಅಧಿಕಾರಿಗಳಾದ ಡಾ.ಶ್ರೀಧರ, ಡಾ.ಅಂಬಿಕಾ ಅವರು, ಆಹಾರ ವಿಧಾನಗಳ ಮಹತ್ವ ಮತ್ತು ಅಗತ್ಯತೆ, ಆಕಸ್ಮಿಕ ಬೆಂಕಿಯಿಂದ ಉಂಟಾಗುವ ಸುಟ್ಟಗಾಯ, ತಲೆ ಸುತ್ತು, ಮೂರ್ಛೆ ಹೋಗುವಿಕೆ, ಕ್ರೀಡಾ ಸಮಯದಲ್ಲಿನ ಗಾಯಗಳು ಇತ್ಯಾದಿಗಳಿಗೆ ಅನುಸರಿಸಬೇಕಾದ ಪ್ರಥಮ ಚಿಕಿತ್ಸೆ ವಿಧಾನಗಳ ಬಗ್ಗೆ ಮಾಹಿತಿ ನೀಡಿದರು.

ತಾಲೂಕು ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಮಾರುತಿ, ನೋಡಲ್ ಅಧಿಕಾರಿ ಸಿದ್ಧಲಿಂಗೇಶ್ವರ, ಸಂಪನ್ಮೂಲ ವ್ಯಕ್ತಿಗಳಾದ ಶ್ರೀಕಾಂತ ಬಾಗೇವಾಡಿ, ಮೌನೇಶ ಇತರರಿದ್ದರು.

ಅಯ್ಯಪ್ಪ ಸ್ವಾಮಿಗೆ ಚಿನ್ನದ ಕಿರೀಟ

ಸಿರುಗುಪ್ಪ: ನಗರದ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಅಯ್ಯಪ್ಪ ಸ್ವಾಮಿಯ ಉತ್ಸವ ಮೂರ್ತಿಗೆ ಕಾರ್ಕಳ ಕುಟುಂಬದ ಭಕ್ತರು ಬಂಗಾರದ ಕಿರೀಟ ಕಾಣಿಕೆ ಕೊಟ್ಟು ಹರಕೆ ತೀರಿಸಿದರು. ನಗರದ ನಿವಾಸಿ ಕಾರ್ಕಳ ಚಂದ್ರಶೇಖರ ಬಾಬು ಹಾಗೂ ಕುಟುಂಬದ ಸದಸ್ಯರು ಚಿನ್ನದ ಕಿರೀಟ ನೀಡಿದರು. ಅತ್ತೆ, ಮಾವನ ಪ್ರೇರಣೆಯೊಂದಿಗೆ ಕಿರೀಟವನ್ನು ದೇವಸ್ಥಾನದ ಗುರುಸ್ವಾಮಿ ಕೋಟಿರೆಡ್ಡಿ ಸ್ವಾಮಿಗೆ ಹಸ್ತಾಂತರಿಸಿದರು. ಗುರುಸ್ವಾಮಿಗಳಾದ ಕೃಷ್ಣಮೂರ್ತಿ, ಎನ್.ಬಿ.ವೆಂಕಟೇಶ, ಮನೋಹರ, ವೆಂಕಪ್ಪ, ರಾಧೆ ಶ್ಯಾಂ, ಶಿವರುದ್ರಗೌಡ, ರಂಗಸ್ವಾಮಿ, ಚಿಲಕನಟ್ಟಿ ಗುರುರಾಜ, ಶ್ರೀನಿವಾಸ ಇದ್ದರು.

ಅಧಿಕಾರಿಗಳಿಗೆ ಜಿಲ್ಲಾ ಪಂಚಾಯಿತಿ ಸಿಇಒ ಈಶ್ವರ ಕುಮಾರ್ ಕಾಂದೂ ಸೂಚನೆ

ಬೇಸಿಗೆಯಲ್ಲಿ ನೀರಿನ ಕೊರತೆಯಾಗದಂತೆ ನೋಡಿಕೊಳ್ಳಿ

■ **ವಿಕ ಸುದ್ದಿಲೋಕ** ಮಸ್ಕಿ

ತಾಲೂಕಿನ ಕೋಳಬಾಳ, ಗುಡದೂರು ಗ್ರಾ.ಪಂ.ಗಳಿಗೆ ಜಿ.ಪಂ. ಸಿಇಒ ಈಶ್ವರ ಕುಮಾರ್ ಕಾಂದೂ ಶುಕ್ರವಾರ ಭೇಟಿ ನೀಡಿ ನಾನಾ ಕಡತಗಳನ್ನು ಶುಕ್ರವಾರ ಪರಿಶೀಲಿಸಿದರು.

ಕೋಳಬಾಳ ಗ್ರಾ.ಪಂ. ವ್ಯಾಪ್ತಿಯ ಹಂಚಿನಾಳ ಕ್ಯಾಂಪ್ ಕುಡಿಯುವ ನೀರಿನ ಕೆರೆಗೆ ಭೇಟಿ ನೀಡಿ, ನೀರು ಸಂಗ್ರಹಣೆ ಪ್ರಮಾಣ, ಕೆರೆಯಿಂದ ಎಷ್ಟು ಹಳ್ಳಿಗಳಿಗೆ ನೀರು ಪೂರೈಕೆಯಾಗುತ್ತಿದೆ ಎಂಬುದರ ಬಗ್ಗೆ ಮಾಹಿತಿ ಪಡೆದರು.

''ತುಂಗಭದ್ರಾ ಎಡದಂಡೆ ನಾಲೆಗೆ ನೀರು ಹರಿಸುವುದನ್ನು ಸ್ಥಗಿತಗೊಳಿಸುವುದರಿಂದ ತಾಲೂಕಿನ ಎಲ್ಲಕೆರೆಗಳನ್ನು ಭರ್ತಿ ಮಾಡಬೇಕು. ಬೇಸಿಗೆಯಲ್ಲಿ ಕುಡಿಯುವ ನೀರು ಸಮರ್ಪಕ ಪೂರೈಕೆಗೆ ಈಗಿನಿಂದಲೇ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು,'' ಎಂದು ಸೂಚಿಸಿದರು.

ಹಂಚಿನಾಳದಲ್ಲಿ ಮನರೇಗಾದಡಿ ನಿರ್ಮಿಸಿದ ಸಿಸಿ ರಸ್ತೆ ವೀಕ್ಷಿಸಿದರು. ಕೋಳಬಾ